ಸಿಸಿ. ನಂಬರಃ 557/2023

ಪಿ. ಡಬ್ಲ್ಯೂಃ 2

ದಿಃ 28-06-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ವಿ.ವಿ.ಎಸ್ ರವರಿಂದಃ

ನೀವು ಯಾವ ಕೆಲಸವನ್ನು ಮಾಡುತ್ತೀರಿ ಎಂದರೆ ಸಾಕ್ಷಿಯು ಸೂರ್ಯ ಸೊಸೈಟಿಯಲ್ಲಿ ಸಾಲ ವಸೂಲಾಧಿಕಾರಿಯಾಗಿ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಆದ ಕಾರಣ ಜಾಸ್ತಿ ಸಮಯ ನ್ಯಾಯಾಲಯದಲ್ಲಿ ಇರುತ್ತೀರಿ ಎಂದರೆ ಸರಿ. ಸಾಕ್ಷಿಯನ್ನು ಕೊಡಲು ಹುಷಾರು ಇದ್ದವರನ್ನು ವಸೂಲಾತಿಯಾಧಿಕಾರಿಯಾಗಿ ನೇಮಕ ಮಾಡುತ್ತಾರೆ ಎಂದರೆ ಸರಿ. ಪಂಚನಾಮೆಗೆಂದು ಯಾರು ಕರೆದಿರುತ್ತಾರೆ ಎಂದರೆ ಪೋಲೀಸರು ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಕರೆದಿರುತ್ತಾರೆ ಎಂದರೆ ಸಾಕ್ಷಿಯು ಬೆಳಿಗ್ಗೆ 11 ರಿಂದ 12.30 ಗಂಟೆಯವರೆಗೆ ಕರೆದಿರುತ್ತಾರೆ, ನಿಖರವಾಗಿ ಹೇಳಲು ಬರುವುದಿಲ್ಲ. ಆ ಸಮಯದಲ್ಲಿ ನೀವು ಎಲ್ಲಿ ಇದ್ದೀರಿ ಎಂದರೆ ಶಾಲೆಯ ಹತ್ತಿರ ಇದ್ದೇವು ಎಂದು ನುಡಿಯುತ್ತಾರೆ. ಆ ದಿನ ರಜೆ ಇತ್ತಾ ಅಥವಾ ವರ್ಕಿಂಗ್ ಡೇ ಇತ್ತಾ ಎಂದರೆ ಸಾಕ್ಷಿಯು ಆದಿ ದಿನ ಫೀಲ್ಡ್ ವರ್ಕಗೆ ಹೋಗಿ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ಸೊಸೈಟಿಯಲ್ಲಿ ನೀವು ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಸೂರ್ಯ

ಸೌಹಾರ್ದ ಮುಖ್ಯ ಶಾಖೆ: ಅಲಗೇರಿ ಅಂಕೋಲಾದಲ್ಲಿದೆ ಎಂದು ನುಡಿಯುತ್ತಾರೆ. ಎಲ್ಲಿಯಾದರೂ ಹೊರಗಡೆ ಹೋಗಬೇಕಾದರೆ ಇಂತಹ ಕಡೆ ಹೋಗುತ್ತೇವೆ ಎಂದು ಬರೆದಿಟ್ಟು ಹೋಗುವ ಮುಮೆಂಟ್ ರಜಿಸ್ಟರ ಇರುತ್ತದೆ ಎಂದರೆ ಸಾಕ್ಷಿಯು ಅಂತಹ ಯಾವುದೆ ರಜಿಸ್ಟರ ಇರುವುದಿಲ್ಲ ಎಂದು ನುಡಿಯುತ್ತಾರೆ. ಹಾಜರಾತಿ ಪುಸ್ತಕ ಇರುತ್ತದೆಯಾ ಎಂದರೆ ಇರುತ್ತದೆ ಎಂದು ನುಡಿಯುತ್ತಾರೆ. ಆ ದಿನ ಸಹಿ ಮಾಡಿದ್ದರ ಬಗ್ಗೆ ನನಗೆ ನೆನಪಿರುವುದಿಲ್ಲ, ಆದರೆ ಬ್ಯಾಂಕಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಪೀಲ್ಡ್ ವರ್ಕ ಎಂದರೆ ಏನು ಎಂದರೆ ಸಾಕ್ಷಿಯು ಸಾಲದ ವಸೂಲಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ದಿ:13-04-2023 ರಂದು ಯಾರ ಸಾಲದ ವಸೂಲಾತಿಗೆ ಹೋಗಿರುತ್ತೀರಿ ಎಂದು ನೆನಪಿರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

2. ನಿಮ್ಮ ಪ್ರಕಾರ ಘಟನಾ ಸ್ಥಳಕ್ಕೆ ಎಷ್ಟು ಗಂಟೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ನಿಖರವಾಗಿ ಹೇಳಲು ಬರುವುದಿಲ್ಲ, ಬೆಳಿಗ್ಗೆ 11 ರಿಂದ 12.30 ಗಂಟೆಯ ಒಳಗಡೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಪಂಚನಾಮೆಯನ್ನು ಯಾರು ಬರೆದರು ಎಂದರೆ ಸಾಕ್ಷಿಯು ನಾವು ಹೇಳಿದ ಪ್ರಕಾರ ಪೊಲೀಸರೇ ಬರೆದಿರುತ್ತಾರೆ. ನೀವು ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿ. ಇದೇ ರೀತಿ ಅಪಘಾತವಾಗಿರುತ್ತದೆ ಎಂದು ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-1 ಸುಚೇತ್ ಗಾಂವಕರ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಯಾವಾಗ ಹೇಳಿರುತ್ತಾರೆ ಎಂದರೆ ಸಾಕ್ಷಿಯು

ದಿಃ13-04-2023 ರಂದೇ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸಂದರ್ಭದಲ್ಲಿ ಶೋಭಾ ಡಾಂಬರು ರಸ್ತೆಯಿಂದ ಎಷ್ಟು ಅಂತರದಲ್ಲಿ ಕಚ್ಚಾ ರಸ್ತೆಯಲ್ಲಿ ಇದ್ದರು ಎಂದರೆ ಸಾಕ್ಷಿಯು ಅಂದಾಜು 3 ಮೀಟರ್ ಅಂತರದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಅಪಘಾತವಾದ ಸಂದರ್ಭದಲ್ಲಿ ಚಾಸಾ-1 ರವರು ಶೋಬಾ ಇವರು ಯಾವ ಬದಿಯಲ್ಲಿ ಇದ್ದರು ಎಂದರೆ ಸಾಕ್ಷಿಯು ಎಡಬದಿಯಲ್ಲಿ ಇದ್ದರು ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸಮಯದಲ್ಲಿ ಶೋಭಾ ಇವರು ಎಲ್ಲಿ ಬಿದ್ದಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-1 ರವರು ಶೊಭಾ ರಸ್ತೆಯ ಮೇಲೆ ಬಿದ್ದಿರುತ್ತಾರೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತವಾದ ಸ್ಥಳದಿಂದ ಎಷ್ಟು ದೂರದಲ್ಲಿ ಬಿದ್ದಿರುತ್ತಾಳೆ ಎಂದರೆ ಸಾಕ್ಷಿಯು ಒಂದರಿಂದ ಒಂದೂರವೆ ಮೀಟರ್ ದೂರದಲ್ಲಿ ಬಿದ್ದಿರುತ್ತಾಳೆ ಎಂದು ನುಡಿಯುತ್ತಾಳೆ. ವಾಹನದ ಯಾವ ಭಾಗ ಶೋಭಾಗೆ ತಾಗಿತ್ತು ಎಂದರೆ ಸಾಕ್ಷಿಯು ಮಧ್ಯದ ಭಾಗ ತಾಗಿತ್ತು ಎಂದು ನುಡಿಯುತ್ತಾರೆ. ಶೋಭಾ ಹಾರಿ ಬಿದ್ದಾಗ ವಾಹನವು ಎಲ್ಲಿ ಇತ್ತು ಎಂದರೆ ಸಾಕ್ಷಿಯು ಆಟೊವನ್ನು ಓಡಿಸಿಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಇಲೆಕ್ಟ್ರಿಕ್ ಕಂಬಗಳು ಇದ್ದೀದ್ದರ ಬಗ್ಗೆ ಮಾಹಿತಿಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು 2 ಕಂಬಗಳು ಇದ್ದರಬಹುದು ಅದರ ಬಗ್ಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. 2 ಕಂಬಗಳು ಎಷ್ಟು ಮೀಟರ್ ಅಂತರದಲ್ಲಿ ಇರುತ್ತವೆ ಎಂದರೆ 2 ಮೀಟರ್ ಅಂತರದಲ್ಲಿ ಇರುತ್ತವೆ. ಡಾಂಬರು ರಸ್ತೆಯ ಅಂಚಿನಿಂದ ಎಷ್ಟು ಮೀಟರ್ ಅಂತರದಲ್ಲಿ ಇರುತ್ತವೆ ಎಂದರೆ ಸಾಕ್ಷಿಯು 2 ಮೀಟರ್ ಅಂತರದಲ್ಲಿ

ಇರುತ್ತವೆ ಎಂದು ನುಡಿಯುತ್ತಾರೆ. ಅಪಘಾತವಾಯಿತು ಎನ್ನುವ ಸ್ಥಳ ಎಲೆಕ್ಟ್ರಿಕ್ ಕಂಬಗಳು ಎಷ್ಟು ಮೀಟರ್ ಅಂತರದಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಅಂದಾಜು 20 ಮೀಟರ್ ಅಂತರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

3. ನಿಮ್ಮ ಮನೆ ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಬಾವಿಕೇರಿಯಲ್ಲಿ ಬರುತ್ತಿದ್ದು, ಅಂದಾಜು ಒಂದೂವರೆ ಕಿ.ಮೀ ಆಗಬಹುದು. ಅಪಘಾತ ಸ್ಥಳದ ವಿವರಣೆಯನ್ನು ಏನಾದರೂ ಪಂಚಾಮೆಯ ಸಂದರ್ಭದಲ್ಲಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ನಾವು ಹೇಳಿರುವುದಿಲ್ಲ, ಪೊಲೀಸರೇ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಶೋಭಾ ಇವರು ಬಿದ್ದ ಸ್ಥಳದ ವಿವರಣೆಯನ್ನು ಏನಾದರೂ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಜಾಗವನ್ನು ಮಾತ್ರ ತೋರಿಸಿರುತ್ತೇನೆ, ಅವರೇ ಫೋಟೊವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಕಾಶೆಯನ್ನು ಯಾವುದರಿಂದ ಬರೆದಿರುತ್ತಾರೆ ಎಂದರೆ ಸಾಕ್ಷಿಯು ಪೆನ್ನಿನಿಂದ ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

ನ್ಯಾಯಾಲಯದ ಬೆಳಗಿನ ಅವಧಿ ಮುಕ್ತಾಯವಾಗಿದ್ದರಿಂದ ಪಾಟಿ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

ಮಧ್ಯಾಹ್ನದ ಅವಧಿಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಆರೋಪಿತರ  ಪರ ವಕೀಲರಾದ ಶ್ರೀ ವಿ.ವಿ.ಎಸ್ ರವರಿಂದಃ

4. ಅಪಘಾತವಾಯಿತು ಎನ್ನುವ ಸ್ಥಳದಲ್ಲಿ ಟಾಯರ್ ಮಾರ್ಕ ಏನಾದರೂ ಇತ್ತಾ ಎಂದರೆ ಸಾಕ್ಷಿಯು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಅಪಘಾತವಾದ ಸ್ಥಳದಲ್ಲಿ ಏನಾದರೂ ಮಾರ್ಕ ಇತ್ತಾ ಎಂದರೆ  ನಾನು ಗಮನಿಸಿರುವುದಿಲ್ಲ. ವಾಹನದ ಬಿಡಿ ಭಾಗಗಳು  ಚೂರಾಗಿ ಬಿದ್ದಿದ್ದವು. ಸಾಕ್ಷಿಯು ಮುಂದುವರೆದು ಯಾವ ಭಾಗ ಎಂದು ಹೇಳಲಿಕ್ಕೆ ಬರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸರಿಗೆ ಏನಾದರೂ ಕನ್ನಡಿ ಚೂರುಗಳು ಬಿದ್ದರುವುದನ್ನು  ತೋರಿಸಿರುತ್ತೀರಾ ಎಂದರೆ ಸಾಕ್ಷಿಯು ಪೊಲೀಸರು ರಸ್ತೆ ಮೇಲೆ ಬಿದ್ದಿರುವ ಚೂರುಗಳನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ಬರೆದಿರುವ ವಿಷಯಗಳನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಿಮ್ಮ ಉದ್ಯೋಗ ವ್ಯವಹಾರ ಎಂದು  ಪೊಲೀಸರಿಗೆ ಏನಾದರೂ ಹೇಳಿರುತ್ತೀರಾ ಎಂದರೆ ಸಾಕ್ಷಿಯು  ಆ  ರೀತಿ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಪಂಚನಾಮೆಯಲ್ಲಿ ನಿಮ್ಮ ವೃತ್ತಿಯನ್ನು ವ್ಯವಹಾರ ಎಂದು ಕಾಣಿಸಿರುತ್ತಾರೆ ಎಂದರೆ ಸರಿ. ಇದನ್ನು ನೋಡಿ ಇದು ತಪ್ಪಾಗಿ ನಮೂದು ಆಗಿರುತ್ತದೆ ಎಂದು ಪೊಲೀಸರಿಗೆ ಏನಾದರೂ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ಖಾಸಗಿ ಉದ್ಯೋಗ ಹಾಗೂ ಖಾಸಗಿ ವ್ಯವಹಾರ ಮಾಡುತ್ತೇನೆ ಎಂದು  ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ವ್ಯವಹಾರ ಮಾಡುತ್ತೀರಿ ಎಂದರೆ ಸಾಕ್ಷಿಯು ನಮ್ಮ ಅಂಗಡಿಯು

ಇದೆ ಎಂದು ನುಡಿಯುತ್ತಾರೆ. ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಅಂಗಡಿಯಲ್ಲಿ ಇರುತ್ತೀರಿ ಎಂದರೆ ಆಳುಗಳು ಇರುತ್ತಿದ್ದು, ನಾನು ಇರುವುದಿಲ್ಲ ಎಂದು ನುಡಿಯುತ್ತಾರೆ. ಅಂಗಡಿಯು ಎಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಬಾವಿಕೇರಿ ಪ್ರೌಢಶಾಲೆಯ ಮುಂದೆ ಬರುತ್ತದೆ ಎಂದು ನುಡಿಯುತ್ತಾರೆ. ನನ್ನದು ಈ ರೀತಿಯ ಯಾವುದೇ ವ್ಯವಹಾರ ಇರುವುದಿಲ್ಲ ಹಾಗೂ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಸಿಮೇಂಟ್ ಮತ್ತು ರೇತಿ ವ್ಯವಹಾರ ಮಾಡುತ್ತೇವೆ ಎಂದು ನುಡಿಯುತ್ತಾರೆ. ರೇತಿಯನ್ನು ಯಾರಿಂದ ಖರೀದಿ ಮಾಡುತ್ತೀರಿ ಎಂದರೆ ಸಾಕ್ಷಿಯು ಏಜೆಂಟ್ ಇವರಿಂದ ಮಾಡುತ್ತೇನೆ ಎಂದು ನುಡಿಯುತ್ತಾರೆ. ಒಂದಿಬ್ಬರು ಏಜೆಂಟರ ಹೆಸರುಗಳನ್ನು ಹೇಳಿ ಎಂದರೆ ಸಾಕ್ಷಿಯು ರವಿ ಎಂದು ನುಡಿದಿದ್ದು, ಅವರು ಹೊನ್ನಾವರದ ಬಳಕೂರಿನವರು ಆಗಿರುತ್ತಾರೆ. ಸಿಮೆಂಟನ್ನು ಯಾರಿಂದ ಖರೀದಿ ಮಾಡುತ್ತೀರಿ ಎಂದರೆ ಸಾಕ್ಷಿಯು ಟಿ ಎಸ್ ಪ್ರಭು ಇವರಿಂದ ಮಾಡುತ್ತೇವೆ ಎಂದು ನುಡಿಯುತ್ತಾರೆ. ವ್ಯವಹಾರ ಮಾಡಲು ನಿಮ್ಮ ಹೆಸರಿಗೆ ಪರವಾಣಿಗೆ ಇರುತ್ತದೆಯಾ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಇರುವುದಿಲ್ಲ, ನನ್ನ ತಂದೆಯವರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ರೇತಿ ವ್ಯವಹಾರ ಮಾಡಲು ಯಾವ ರೀತಿಯ ಪರವಾಣಿಗೆ ಬೇಕು ಎಂದರೆ ಸಾಕ್ಷಿಯು ಗ್ರಾಮ ಪಂಚಾಯತಿಯವರಿಂದ ಪರವಾಣಿಗೆ ಬೇಕು ಎಂದು ನುಡಿಯುತ್ತಾರೆ. ರೇತಿ ವ್ಯವಹಾರ ಮಾಡಲು ನಿಮ್ಮ ತಂದೆಯ ಹೆಸರಿಗೆ ಪಂಚಾಯಿತಿಯಿಂದ ಪರವಾಣಿಗೆ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಪಡೆದುಕೊಂಡಿರುತ್ತೇನೆ, ಆದರೆ ಯಾವಾಗ ಎಂದು ನೆನಪಿರುವುದಿಲ್ಲ. ನಿಮ್ಮ ತಂದೆಯವರ

ಪೂರ್ಣ ಹೆಸರು ಮತ್ತು ವಿಳಾಸ ಏನು ಎಂದರೆ ನಾರಾಯಣ ಗೋವಿಂದ ನಾಯಕ, ಪಂಚಾಯತ್ ಬಾವಿಕೇರಿ, ಅಂಕೋಲಾ ಎಂದು ನುಡಿಯುತ್ತಾರೆ. ಈ ವ್ಯವಹಾರವನ್ನು ನಿಮ್ಮ ತಂದೆಯವರ ಹೆಸರಿಗೆ ಇದ್ದ ಪರವಾಣಿಗೆ ಆಧಾರದ ಮೇಲೆ ಮಾಡುತ್ತಿರೋ ಅಥವಾ ನಿಮ್ಮ ಹೆಸರಿಗೆ ಇದ್ದ ಪರವಾಣಿಗೆ ಮೇಲೆ ಮಾಡುತ್ತೀರೋ ಎಂದರೆ ಸಾಕ್ಷಿಯು ನಮ್ಮ ತಂದೆಯವರ ಹೆಸರಿಗೆ ಇದ್ದ ಪರವಾಣಿಗೆ ಮೇಲೆ ಮಾಡುತ್ತೇನೆ, ನನ್ನ ಹೆಸರಿಗೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಪೊಟೋಗಳನ್ನು ಯಾವುದರಿಂದ ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ಮೊಬೈಲ್ ಮತ್ತು ಕ್ಯಾಮರಾದಿಂದ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಕ್ಯಾಮರಾ ಇತ್ತು ಎಂದರೆ ಸಾಕ್ಷಿಯು ಡಿ ಎಸ್ ಎಲ್ ಆರ್ ಕ್ಯಾಮರಾದಿಂದ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಗುರುತುಪಡಿಸಿದ ಪೊಟೋಗಳನ್ನು ಯಾವ ಕ್ಯಾಮರಾ ಅಥವಾ ಮೋಬೈಲಿನಿಂದ ಪಡೆದುಕೊಂಡಿರುತ್ತಾರೆ ಎಂದು ಹೇಳಲು ಬರುತ್ತದೆಯಾ ಎಂದರೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

5. ಘಟನಾ ಸ್ಥಳಕ್ಕೆ ಹೋಗಿದ್ದಾಗಲಿ, ನನ್ನ ಸಮಕ್ಷಮ ಪಂಚನಾಮಯನ್ನು ಜರುಗಿಸಿದ್ದಾಗಲಿ, ನಕಾಶೆಯನ್ನು ಮಾಡಿದ್ದಾಗಲಿ ಹಾಗೂ ಪೊಟೋಗಳನ್ನು ಪಡೆದಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ, ಚಾಸಾ-1 ರವರು ನಿಮಗೆ ಪರಿಚಯವಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಆದ ಕಾರಣ ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಸುಳ್ಳು

ಸಾಕ್ಷಿ ಹೇಳಲು ಎಕ್ಸಪರ್ಟ ಆಗಿದ್ದರ ಕಾರಣ ಹಿಂದಿನ ವಿಚಾರಣಾ ದಿನಾಂಕದಂದು ಚಾಸಾ–2 ರವರು ನ್ಯಾಯಾಲಯಕ್ಕೆ ಬಂದಿದ್ದರೂ ಸಹ ನಾನೆ ಸಾಕ್ಷಿಯನ್ನು ನುಡಿಯಲು ಸರಕಾರಿ ವಕೀಲರ ಹತ್ತಿರ ಹೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನೀವು ಬ್ಯಾಂಕಿನ ಪರವಾಗಿ ಎಷ್ಟು ಪ್ರಕರಣಗಳಲ್ಲಿ ಸಾಕ್ಷಿ ನುಡಿದಿದ್ದೀರಿ ಎಂದರೆ ಸಾಕ್ಷಿಯು 10–15 ಪ್ರಕರಣಗಳಲ್ಲಿ ನುಡಿದಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ–1 ರವರು ಇವತ್ತಿಗೂ ಸಹ ನನ್ನ ಜೊತೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೂರ್ಯ ಸೊಸೈಟಿಯ ಕೆಲಸದ ಅವಧಿ ಎಷ್ಟು ಎಂದರೆ ಸಾಕ್ಷಿಯು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಎಂದು ನುಡಿಯುತ್ತಾರೆ. ಚಾಸಾ–1 ರವರು ಆಟೊ ಎಷ್ಟು ವೇಗವಾಗಿತ್ತು ಎಂದು ಏನಾದರೂ ಹೇಳಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.